ಓ ಎಸ್ ನಂ. 193/2023
ಪಿ ಡಬ್ಲ್ಯು 1
ದಿನಾಂಕ 04/06/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರಃ ಶ್ರೀ ಎಂ ಒ ಜೆ ವಕೀಲರಿಂದಃ

ನನ್ನ 2ನೇ ಅಣ್ಣನಾದ ಚಿಕ್ಕಣ್ಣಯ್ಯನವರ ಹೆಸರಿಗೆ ಸರ್ವೆ ನಂ.128/2 ಪೈಕಿ 1 ಎಕರೆ 8 ಗುಂಟೆ, ಸರ್ವೆ ನಂ.179/2 ಪೈಕಿ 2 ಎಕರೆ 27 ಗುಂಟೆ ಜಮೀನು ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿ. ಅದೇರೀತಿ ಚಿಕ್ಕಣ್ಣಯ್ಯರವರ ಹೆಸರಿಗೆ ಖಾತೆ ವಗೈರೆ ಬದಲಾಗಿರುತ್ತದೆ ಎಂದರೆ ಸರಿ. ಅದರಂತೆ ಚಿಕ್ಕಣ್ಣಯ್ಯರವರು ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎಂದರೆ ಸರಿ. ನನ್ನ ಹಿರಿಯ ಸಹೋದರರಾದ ಜಯಣ್ಣರವರ ಮಗನಾದ ಯತೀಶ ಮತ್ತು ನನ್ನ ಹೆಸರಿಗೆ ದಾವಾ ಸ್ವತ್ತುಗಳು ಜಂಟಿ ಖಾತೆಯಲ್ಲಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನನ್ನು ಅವರ ಮೈನರ್ ಗಾರ್ಡಿಯನ್ನಾಗಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಪಹಣಿಗಳಲ್ಲಿ ಯತೀಶ ಮೈನರ್ ಗಾರ್ಡಿಯನ್ ಮಲ್ಲಿಕಾರ್ಜುನಯ್ಯ ಎಂದು ನಮೂದುಗಳು ಇಂದಿಗೂ ಬರುತ್ತಿವೆ ಎಂದರೆ ಸರಿ. ಜಮೀನಿನ ಸ್ವಾಧೀನ ಸಹ ಜಂಟಿಯಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಜಂಟಿ ಹೆಸರಿನಲ್ಲಿರುವ ಪಹಣಿಗಳನ್ನು ಪ್ರತ್ಯೇಕ

ಮಾಡುವಂತೆ ನಾನು ಎ ಸಿ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ಪ್ರಸ್ತುತ ದಾವೆಯಲ್ಲಿ ನನಗೆ ಸ್ವಾಧೀನ ಕೊಡಿಸಿಕೊಡುವಂತೆ ಪರಿಹಾರ ಕೋರಿರುತೆತೇನಾ ಎಂದರೆ ಸಾಕ್ಷಿ ಪ್ರತಿವಾದಿ ಹಿಸ್ಸೆಗೆ ಬಂದಿರುವ ಸ್ವತ್ತನ್ನು ಅವರು ಮಾರಾಟ ಮಾಡಿರುತ್ತಾರೆ, ನನ್ನ ಆಸ್ತಿಯನ್ನು ನನ್ನ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೋರಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಭಾವಚಿತ್ರವನ್ನು ತೋರಿಸಿ ಅದರಲ್ಲಿ ಪ್ರತಿವಾದಿ ಯತೀಶರವರ ಉಪಸ್ಥಿತಿ ಇದೆ ಎಂದು ಕೇಳಲಾಗಿ ಸಾಕ್ಷಿ ಹೌದು ಎಂದು ಒಪ್ಪಿರುತ್ತಾರೆ. ಸದರಿ ಭಾವಚಿತ್ರವನ್ನು **ನಿಡಿ-2** ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರದಲ್ಲಿ ಕಾಣುವಂತೆ ಇರುವ ಮನೆ ಪ್ರತಿವಾದಿ ಸ್ವಾಧೀನದಲ್ಲಿದೆ ಎಂದರೆ ಸಾಕ್ಷಿ ಅದು ಸುಳ್ಳು ನನ್ನ ಸ್ವಾಧೀನದಲ್ಲಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಮತ್ತೊಂದು ಭಾವಚಿತ್ರವನ್ನು ತೋರಿಸಿ ಅದರಂತೆ ಪ್ರತಿವಾದಿ ದಾವಾ ಆಸ್ತಿಯಲ್ಲಿ ಕಾಯಿ ಕೆಡುವುತ್ತಿರುವುದು ಕಂಡುಬರುತ್ತಿದೆ ಎಂದರೆ ಸಾಕ್ಷಿ ಹೌದು ಸ್ವಾಧೀನದಲ್ಲಿ ನಾನೇ ಇದ್ದೇನೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು **ನಿಡಿ-3** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರ ತೋರಿಸಿ ಅದರಂತೆ ಪ್ರತಿವಾದಿ ದಾವಾ ಜಮೀನಿನಲ್ಲಿ ಮನೆ ಕಟ್ಟಿಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿ ಸದರಿ ಭಾವಚಿತ್ರದಲ್ಲಿ ಕಾಣುತ್ತಿರುವ ಜಮೀನು ನನಗೆ

ಸೇರಿದ್ದು ನನ್ನ ಸ್ವಾಧೀನದಲ್ಲಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು **<u>ನಿಡಿ-4</u>** ಎಂದು ಗುರುತಿಸಲಾಯಿತು. ಸಾಕ್ಷಿಗೆ ಮತ್ತೊಂದು ಭಾವಚಿತ್ರ ತೋರಿಸಿ ಅದರಲ್ಲಿ ಕಾಣುತ್ತಿರುವ ಮನೆಯಲ್ಲಿ ಪ್ರತಿವಾದಿಯೇ ಸ್ವಾಧೀನ ಇದ್ದಾರೆ ಎಂದು ಕೇಳಲಾಗಿ ಸಾಕ್ಷಿ ನನ್ನನ್ನು ದೌರ್ಜನ್ಯದಿಂದ ಮನೆಯಿಂದ ಹೊರಗೆ ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು **<u>ನಿಡಿ-5</u>** ಎಂದು ಗುರುತಿಸಲಾಯಿತು. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗೂ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿ ನಡುವೆ ಯಾವುದೇವಿಭಾಗವಾಗಿಲ್ಲ ಎಂದರೆ ಸಾಕ್ಷಿ ಅವರಿಗೆ ಕೊಡಬೇಕಾದುದ್ದನ್ನು ಈಗಾಗಲೇ ಕೊಡಲಾಗಿದೆ ನನ್ನ ಮತ್ತು ಅವರ ಮದ್ಯ ಯಾವುದೇ ಸಂಬಂದ ಇಲ್ಲ ಎಂದು ನುಡಿಯುತ್ತಾರೆ. ಆಗಾಗಿ ನನ್ನ ಮತ್ತು ಪ್ರತಿವಾದಿ ಹೆಸರಿನಲ್ಲಿ ದಾವಾ ಆಸ್ತಿಗಳ ಖಾತೆ ಜಂಟಿಯಾಗಿದೆ ಎಂದರೆ ಸಾಕ್ಷಿ ಖಾತೆ ಜಂಟಿಯಾಗಿದೆ ಅದನ್ನು ರದ್ದು ಪಡಿಸುವಂತೆ ನಾನು ಪ್ರಕರಣ ದಾಖಲಿಸಿದ್ದೇನೆ ಎಂದು ನುಡಿಯುತ್ತಾರೆ. ಪ್ರತಿವಾದಿ ಸಹ ದಾವಾ ಆಸ್ತಿಗಳ ಸಹಮಾಲೀಕರಾಗಿರುವುದರಿಂದ ನಾನು ಸಲ್ಲಿಸಿರುವ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸಾಕ್ಷಿ ದಾವಾ ಸ್ವತ್ತುಗಳು ನನಗೆ ಮಾತ್ರ ಸೇರಿದ್ದು ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳ ಮೇಲೆ ನನಗೆ ಹಕ್ಕು ಇದೆ ಎಂದು ತೋರಿಸಲು ಯಾವುದಾದರೂ ವಿಭಾಗ

ಪತ್ರ, ಹಕ್ಕು ಪತ್ರ ಅಥವಾ ನೊಂದಾಯಿತ ದಾಖಲೆಗಳನ್ನು ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಂತಹ ಯಾವುದೇ ದಾಖಲೆಗಳು ಆಗಿರುವುದಿಲ್ಲ ಆದ್ದರಿಂದ ದಾವಾ ಆಸ್ತಿಗಳಲ್ಲಿ ನನಗೂ ಮತ್ತು ಪ್ರತಿವಾದಿಗೂ ಸಮಾನವಾದ ಹಕ್ಕು ಇದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.